| KARNATAKA MARITIME BOARD<br>BENGALURU | | |
|---|---|---|
| Name of the Newspaper | **KANNADA PRABHA** | |
| Date | 06-02-2025 | **Language – KANNADA** |



# ಶೀಘ್ರವೇ ಕಾರವಾರ ಬಂದರು ವಿಸ್ತರಣೆ ಕಾಮಗಾರಿ ಆರಂಭ

## ಸ್ಥಳೀಯರನ್ನು ವಿಶ್ವಾಸಕ್ಕೆ ಪಡೆದು ಯೋಜನೆ ಅನುಷ್ಠಾನ: ಜಯರಾಮ್

[illegible]

**KARNATAKA MARITIME BOARD**
**BENGALURU**

| | | |
|---|---|---|
| Name of the Newspaper | **VIJAYA KARNATAKA** | |
| Date | 06-02-2025 | **Language – KANNADA** |

# ಕೇಣಿಯಲ್ಲಿ 150 ಎಕರೆ ಭೂಸ್ವಾಧೀನ

## ಬಂದರು ನಿರ್ಮಾಣಕ್ಕೆ ಜೆಎಸ್‌ಡಬ್ಲ್ಯು ಕಂಪನಿಗೆ 30 ವರ್ಷದ ಗುತ್ತಿಗೆ

**ವಿಕ ಸುದ್ದಿಲೋಕ** ಕಾರವಾರ

ಅಂಕೋಲಾದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಅತಿದೊಡ್ಡ ಕೇಣಿ ಬಂದರು ಸಂಪೂರ್ಣವಾಗಿ ಸಮುದ್ರದಲ್ಲಿಯೇ ನಿರ್ಮಾಣಗೊಳ್ಳಲಿದೆ. ಸಂಪರ್ಕ ಕಾರಿಡಾರ್ ನಿರ್ಮಿಸಲು ಮಾತ್ರ 150 ಎಕರೆ ಭೂಸ್ವಾಧೀನ ಆಗಲಿದೆ ಎಂದು ಜಲಸಾರಿಗೆ ಮಂಡಳಿ ಕಾರ್ಯನಿರ್ವಹಣಾಧಿಕಾರಿ ಜಯರಾಮ ರಾಯಪುರ ತಿಳಿಸಿದರು.




ಕಾರವಾರದಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಜಲಸಾರಿಗೆ ಮಂಡಳಿ ಕಾರ್ಯನಿರ್ವಹಣಾಧಿಕಾರಿ ಜಯರಾಮ ರಾಯಪುರ ಮಾತನಾಡಿದರು.



### ಕಾರವಾರ ಬಂದರು ವಿಸ್ತರಣೆ

ಕಾರವಾರ ವಾಣಿಜ್ಯ ಬಂದರು ವಿಸ್ತರಣೆ ಮಾಡಲು ಅನುಮತಿ ಸಿಕ್ಕಿದೆ. ಇನ್ನೊಂದು ತಿಂಗಳಲ್ಲಿ ಕೆಲಸ ಶುರುವಾಗುತ್ತದೆ. ಬಾವುಟ ಕಟ್ಟೆಯಿಂದಲೇ ಬ್ರೇಕ್ ವಾಟರ್ ನಿರ್ಮಾಣ ಆಗಲಿದೆ ಎಂದು ಜಯರಾಮ ರಾಯಪುರ ಅವರು ಸ್ಪಷ್ಟಪಡಿಸಿದರು. ಬಂದರಿನಿಂದ ಶಿರವಾಡ ರೈಲ್ವೆ ನಿಲ್ದಾಣದ ವರೆಗೆ ರೈಲ್ವೆ ಹಳಿ ಮಾಡಲು ಕಷ್ಟ ಇದೆ. ಹಾಗಾಗಿ ಅಮದಳ್ಳಿಯಲ್ಲಿ ಕೊಂಕಣ ರೈಲ್ವೆ ನಿಗಮ ಜಾಗದಲ್ಲಿ ಹೊಸದಾಗಿ 50 ಕೋಟಿ ರೂ. ವೆಚ್ಚದಲ್ಲಿ ರೈಲ್ವೆ ನಿಲ್ದಾಣ ಮಾಡಲಾಗುತ್ತದೆ ಎಂದರು. ಬೈತಖೋಲ್ ಬಂದರು ಜಾಗದಲ್ಲಿರುವ ಮನೆಗಳನ್ನು ತೆರವು ಮಾಡಿ ಅವರಿಗೆ ಚಿತ್ತಾಕುಲದಲ್ಲಿ ಪುನರ್ವಸತಿ ಕಲ್ಪಿಸುವುದಾಗಿ ತಿಳಿಸಿದರು.

ಪತ್ರಿಕಾಭವನದಲ್ಲಿ ಬುಧವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಕೇಣಿಯಲ್ಲಿ ಬಂದರು ನಿರ್ಮಾಣಕ್ಕೆ ಜೆಎಸ್‌ಡಬ್ಲ್ಯು ಕಂಪನಿಗೆ 30 ವರ್ಷದ ಗುತ್ತಿಗೆ ನೀಡಲಾಗಿದೆ. ಅದರ ನಂತರ ಬಂದರು ಜಲಸಾರಿಗೆ ಮಂಡಳಿ ವ್ಯಾಪ್ತಿಗೆ ಬರುತ್ತದೆ. ಬಂದರು ನೇರವಾಗಿ ರಾಜ್ಯ ಸರಕಾರದ ನಿಯಂತ್ರಣದಲ್ಲಿ ಇರುತ್ತದೆ. ಎಲ್ಲ ಅನುಮತಿ ಪಡೆದುಕೊಳ್ಳುವ ವರೆಗೆ ಕಂಪನಿಯು ಬಂದರು ನಿರ್ಮಾಣ ಕೆಲಸ ಆರಂಭಿಸುವಂತಿಲ್ಲ ಎಂದರು.

ಕೇಣಿ ಬಂದರು ಸಮುದ್ರದಲ್ಲಿ 3.5 ಕಿ.ಮೀ. ಬ್ರೇಕ್ ವಾಟರ್ ನಿರ್ಮಾಣ ಮಾಡಲಾಗುತ್ತದೆ. ಅಲ್ಲಿ 12-1[illegible] ಜೆಟ್ಟಿ ನಿರ್ಮಾಣ ಆಗಲಿದೆ. ಸಮುದ್ರದಲ್ಲಿಯೇ ಸುಮಾರು 150 ಹೆಕ್ಟೇರ್ ಜಾಗ ಸೃಷ್ಟಿಯಾಗುತ್ತದೆ. ಕಡಲತೀರದ ಸುಮಾರು ಒಂದು ಕಿ.ಮೀ. ಪ್ರದೇಶ ಬಂದರು ವ್ಯಾಪ್ತಿಗೆ ಬರಲಿದೆ. ಬಂದರಿನಿಂದ ಹೆದ್ದಾರಿ ವರೆಗೆ 90 ಮೀಟರ್ ಅಗಲದ ಕಾರಿಡಾರ್ ಆಗುತ್ತದೆ. ಅದಕ್ಕೆ ಗುರುತಿಸಿದ 150 ಎಕರೆ ಪ್ರದೇಶದಲ್ಲಿ ಮನೆ, ಗುಡಿಸಲು ಸೇರಿ 75 ಕಟ್ಟಡಗಳಿವೆ. ಅದಕ್ಕೆ ಸೂಕ್ತ ಪರಿಹಾರ ಸಿಗಲಿದೆ ಎಂದರು.

ಮಾವಿನ ಕುರ್ವೆಯಲ್ಲಿ 5 ಮೆಟ್ರಿಕ್ ಟನ್ ಸಾಮರ್ಥ್ಯದ ಬಂದರು, ಮಂಕಿಯಲ್ಲಿ 14 ಮೆಟ್ರಿಕ್ ಟನ್ ಸಾಮರ್ಥ್ಯದ ಬಂದರು, ಮುರುಡೇಶ್ವರದಲ್ಲಿ ಹೊಸ ಬಂದರು, ಭಟ್ಕಳ ಬಂದರು ನವೀಕರಣ, ಹೊನ್ನಾವರದಲ್ಲಿ ಪ್ರವಾಸೋದ್ಯಮಕ್ಕೆ ಪೂರಕವಾದ ಬಂದರು ನಿರ್ಮಿಸಲಾಗುತ್ತದೆ ಎಂದರು. ಮಂಗಳೂರಿನಲ್ಲಿಯೂ ಕ್ರೂಸ್ ಬಂದರು ನಿರ್ಮಾಣವಾಗಲಿದೆ. ಹೊನ್ನಾವರ ಶರಾವತಿ ನದಿ ಹಿನ್ನೀರು ಪ್ರವಾಸೋದ್ಯಮಕ್ಕೆ ಚಿಂತನೆ ನಡೆದಿದೆ ಎಂದರು.

ಬಂದರುಗಳಲ್ಲಿ ಐದು ವರ್ಷಗಳವರೆಗೆ ಹೂಳು ತುಂಬದಂತೆ ನೋಡಿಕೊಳ್ಳಲು ನಿರಂತರ ಡ್ರೆಜ್ಜಿಂಗ್ ನಡೆಸಲು ಗುತ್ತಿಗೆ ನೀಡಲಾಗುತ್ತದೆ. ಹಿನ್ನೀರು ಪ್ರವಾಸೋದ್ಯಮ, ಗಣೇಶ ಗುಡಿ ವಾಟರ್ ಡ್ರೋಮ್ ಬಗ್ಗೆ ಅಧ್ಯಯನ ಆಗುತ್ತಿದೆ ಎಂದು ಮಾಹಿತಿ ನೀಡಿದರು. ಮುಖ್ಯ ಎಂಜಿನಿಯರ್ ದಿವಾಕರ ನಾಯ್ಕ ಇದ್ದರು.

Shot on vivo Z1x
Vivo AI camera

| KARNATAKA MARITIME BOARD<br>BENGALURU | | |
|---|---|---|
| Name of the Newspaper | **VIJAYAVANI** | |
| Date | 06-02-2025 | **Language – KANNADA** |


ಕೆಎಂಬಿ ಸಿಇಒ ಜಯರಾಮ ರಾಯಪುರೆ ಮಾಹಿತಿ | ಕರಾವಳಿ ಜಲಸಾರಿಗೆ ಅಭಿವೃದ್ಧಿ ನೀಲಿನಕ್ಷೆ ಬಿಚ್ಚಿಟ್ಟ ಅಧಿಕಾರಿ

# ಬಂದರು ವಿಸ್ತರಣೆ ಕಾಮಗಾರಿ ಪುನರಾರಂಭ ಶೀಘ್ರ

■ ವಿಜಯವಾಣಿ ಸುದ್ದಿಜಾಲ ಕಾರವಾರ

ಇಲ್ಲಿನ ಬೈತಖೋಲ್ ವಾಣಿಜ್ಯ ಬಂದರು ಕಾಮಗಾರಿಗೆ ಇದ್ದ ಕಾನೂನು ಅಡಚಣೆಗಳು ದೂರವಾಗಿದ್ದು, ಇದೇ ತಿಂಗಳು ಕಾಮಗಾರಿ ಪ್ರಾರಂಭಿಸಲಾಗುವುದು ಎಂದು ಕರ್ನಾಟಕ ಜಲಸಾರಿಗೆ ಮಂಡಳಿಯ ಸಿಇಒ ಜಯರಾಮ ರಾಯಪುರೆ ತಿಳಿಸಿದರು.



ಜಯರಾಮ ರಾಯಪುರೆ

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ಕರ್ನಾಟಕದಲ್ಲಿ ಸುಮಾರು 320 ಕಿಮೀ ಕರಾವಳಿ ಇದೆ. 13 ಸಣ್ಣ ಬಂದರುಗಳಿವೆ. ಆದರೆ, ಬಂದರು ವಹಿವಾಟು ಕೇವಲ ವರ್ಷಕ್ಕೆ 1 ಲಕ್ಷ ಮೆಟ್ರಿಕ್ ಟನ್(ಎಂಟಿಪಿಎ)ಮಾತ್ರ ನಾವು ವಹಿವಾಟು ನಡೆಸುತ್ತಿದ್ದೇವೆ. ಗುಜರಾತ್ 449 ಎಂಟಿಪಿಎ, ಆಂಧ್ರ 119ಎಂಟಿಪಿಎ ವಹಿವಾಟು ನಡೆಸುತ್ತಿವೆ. ಪ್ರಸ್ತುತ ರಾಜ್ಯದಲ್ಲಿ 150 ಎಂಟಿಪಿಎ ವಸ್ತುಗಳ ಆಮದು, ರಫ್ತು ಆಗುತ್ತಿದ್ದು, ಅದು ಆಂಧ್ರ, ತಮಿಳುನಾಡಿನ ಬಂದರಿನ ಮೂಲಕ ನಡೆಯುತ್ತಿದೆ. 2019 ರಲ್ಲಿ ಕರ್ನಾಟಕ ಜಲಸಾರಿಗೆ ಮಂಡಳಿ ಪ್ರಾರಂಭವಾದ ನಂತರ ಜಿಲ್ಲೆಯ ಕರಾವಳಿಯನ್ನು ಸಮರ್ಥವಾಗಿ ಉಪಯೋಗಿಸಲು ಯೋಜನೆ ರೂಪಿಸಿದ್ದೇವೆ.

ಮುಖ್ಯವಾಗಿ ಬಂದರುಗಳನ್ನು ಹಾಗೂ ಅದಕ್ಕೆ ಸಂಪರ್ಕ ರಸ್ತೆ ಹಾಗೂ ರೈಲ್ವೆಯನ್ನು ಕಲ್ಪಿಸಲು ಯೋಜಿಸಲಾಗಿದೆ. ಅದರ ಭಾಗವಾಗಿ ಕಾರವಾರ ಬಂದರು ಸಾಗರ ಮಾಲಾ ಹಾಗೂ ರಾಜ್ಯ ಸರ್ಕಾರದ ಸುಮಾರು 210 ಕೋಟಿ ರೂ. ಅನುದಾನದಿಂದ ಅಭಿವೃದ್ಧಿ ಮಾಡಲು ಯೋಜಿಸಲಾಗಿತ್ತು. ಆದರೆ, ಕೆಲವು ಕಾನೂನು ತೊಡಕುಗಳಾಗಿದ್ದವು. ಈಗ ಎಲ್ಲವೂ ಬಗೆಹರಿದಿದ್ದು, ನ್ಯಾಯಾಲಯಕ್ಕೆ ಸಲ್ಲಿಸಿದ ಯೋಜನೆಯಂತೆ ಬ್ರೇಕರ್ ವಾಟರ್ ಹಾಗೂ ಜೆಟ್ಟಿವರೆಗೆ 6 ಹಡಗು ನಿಲ್ದಾಣ ಕಾಮಗಾರಿಗಳನ್ನು ಶೀಘ್ರ ಪ್ರಾರಂಭಿಸಲಾಗುವುದು ಎಂದರು. ಸದ್ಯ ಕಾರವಾರ ಬಂದರಿನ ಸಾಮರ್ಥ್ಯ 3 ಎಂಟಿಪಿಎ ಇದ್ದು, ಅದನ್ನು 12 ಎಂಟಿಪಿಎಗೆ ಹೆಚ್ಚಿಸುವ ಯೋಜನೆ ಇದೆ ಎಂದರು.

ಹೊನ್ನಾವರ 5 ಎಂಟಿಪಿಎ ಸಾಮರ್ಥ್ಯದ ವಾಣಿಜ್ಯ ಬಂದರು ಕಾಮಗಾರಿಗೆ ಎಲ್ಲ ಅನುಮೋದನೆ ದೊರಕಿದೆ. ಶೀಘ್ರದಲ್ಲಿ ನಿರ್ಮಾಣಕ್ಕೆ ಯೋಜನೆ ಪ್ರಾರಂಭವಾಗಲಿದೆ. ಪಾವಿನಕುರ್ವಾದಲ್ಲಿ ಬಂದರು ನಿರ್ಮಾಣಕ್ಕೆ ಜಾಗತಿಕ ಟೆಂಡರ್ ಕರೆಯಲಾಗಿದೆ. ಮಂಕಿಯಲ್ಲಿ ಹೊಸ ಬಂದರು ಅಭಿವೃದ್ಧಿ, ಹೊನ್ನಾವರ, ಭಟ್ಕಳ ಬಂದರುಗಳ ನವೀಕರಣ ಮಾಡಲಾಗುವುದು ಎಂದರು. ಬಂದರು ಇಲಾಖೆ ಇಂಜಿನಿಯರ್‌ಗಳಾದ ದಿವಾಕರ ನಾಯ್ಕ, ಪ್ರಸಾದ್ ವೇದಿಕೆಯಲ್ಲಿದ್ದರು.

## ಕೇಣಿ ಬಂದರಿಗೆ 150 ಎಕರೆ ಭೂಸ್ವಾಧೀನ

ಅಂಕೋಲಾದ ಕೇಣಿಯಲ್ಲಿ ಗ್ರೀನ್ ಫೀಲ್ಡ್ ಬಂದರು ನಿರ್ಮಾಣಕ್ಕೆ ಜೆಎಸ್‌ಡಬ್ಲ್ಯು ಕಂಪನಿ ಜತೆ 30 ವರ್ಷಗಳ ಒಪ್ಪಂದ ಮಾಡಿಕೊಳ್ಳಲಾಗಿದೆ. 4200 ಕೋಟಿ ರೂ.ಗಳ ಯೋಜನೆ ಇದಾಗಿದ್ದು, 3.5 ಕಿಮೀ ಬ್ರೇಕ್ ವಾಟರ್, ನಿರ್ಮಾಣ ಮಾಡಲಾಗುವುದು. ಸಮುದ್ರದಲ್ಲಿ ಸುಮಾರು 3 ಕಿಮೀ ಜಟ್ಟಿ ನಿರ್ಮಾಣ ಮಾಡಲಾಗುವುದು. ಅಲ್ಲೇ ಸರಕು ಸಂಗ್ರಹಣೆಯ ಪ್ರಾಂಗಣವೂ ಇರಲಿದೆ. ಕೇಣಿಯಿಂದ ರಾಷ್ಟ್ರೀಯ ಹೆದ್ದಾರಿ 66 ಕ್ಕೆ ಹಾಗೂ ಕೊಂಕಣ ರೈಲ್ವೆ ಮಾರ್ಗಕ್ಕೆ ಸಂಪರ್ಕ ಕಲ್ಪಿಸಲು 90 ಮೀಟರ್ ಅಗಲದ, ಜಾಗವನ್ನು ಕೆಐಎಡಿಬಿ ಮೂಲಕ ಭೂ ಸ್ವಾಧೀನ ಮಾಡಿಕೊಳ್ಳಲು ಯೋಜಿಸಲಾಗಿದೆ. ಸುಮಾರು 75 ಕಟ್ಟಡಗಳು ಹಾಗೂ 150 ಎಕರೆ ಜಮೀನು ಭೂ ಸ್ವಾಧೀನವಾಗಲಿದೆ. ಸ್ಥಳೀಯರಿಗೆ ಉದ್ಯೋಗಾವಕಾಶ ದೊರೆಯಲಿದೆ. ಭೂಮಿಗೆ ಬೆಲೆ ಬರಲಿದೆ ಎಂದು ಜಯರಾಮ ರಾಯಪುರೆ ತಿಳಿಸಿದರು.

## ಕೆಎಂಬಿ ಸಿಇಒ ಹೇಳಿದ್ದು

- ಅಮದಳ್ಳಿ ಬಳಿ 50 ಕೋಟಿ ರೂ. ವೆಚ್ಚದಲ್ಲಿ ರೈಲ್ವೆ ನಿಲ್ದಾಣ ಮಾಡಿಕೊಡುವ ಬಗ್ಗೆ ಕೊಂಕಣ ರೈಲ್ವೆ ಜತೆ ಚರ್ಚೆ ನಡೆದಿದೆ
- ಕಡಲ ಕೊರೆತ ತಡೆಗೆ ದೇಶದಲ್ಲೇ ಮೊದಲ ಬಾರಿ ಶೋರ್ ಲೈನ್ ಮ್ಯಾನೇಜ್‌ಮೆಂಟ್ ಪ್ಲಾನ್ ಮಾಡಲಾಗಿದೆ.
- ಕಾಳಿ, ಶರಾವತಿ ನದಿಗಳಲ್ಲಿ ಒಳನಾಡು ಜಲಸಾರಿಗೆ ಅಭಿವೃದ್ಧಿಗೆ ಬೇಕಾದ ಜಟ್ಟಿ ನಿರ್ಮಾಣಕ್ಕೆ ಡಿಪಿಆರ್ ಸಿದ್ಧವಾಗುತ್ತಿದೆ.
- ಗಣೇಶಗುಡಿ ಹಿನ್ನೀರಿನಲ್ಲಿ ವಾಟರ್ ಡ್ರೋಂ (ನೀರಿನ ಮೇಲೆ ವಿಮಾನ ಇಳಿದಾಣ) ನಿರ್ಮಾಣಕ್ಕೆ ಪ್ರಸ್ತಾವನೆ ಸಿದ್ಧ ಮಾಡುತ್ತಿದ್ದೇವೆ.
- ಕಾರವಾರ ಬಂದರಿನಲ್ಲಿ ಸುಮಾರು 20 ವರ್ಷಗಳಿಂದ ಬಿದ್ದಿರುವ ಗ್ರಾನೈಟ್‌ಗಳನ್ನು ಹರಾಜು ಹಾಕಲು ಕ್ರಮ ವಹಿಸಲಾಗಿದೆ.
- ಕಾರವಾರ ಟ್ಯಾಗೋರ್ ಕಡಲ ತೀರವನ್ನು ಸಾಗರಮಾಲಾ ಡೆವಲಪ್ ಪಾರ್ಟನರ್‌ಶಿಪ್‌ನೊಂದಿಗೆ
- ಹೊನ್ನಾವರ ಹಳೆಯ ಬಂದರಿನಲ್ಲಿ ಹಡಗು ಕಟ್ಟುವ ಕೈಗಾರಿಕೆ ಸ್ಥಾಪನೆಗೆ ಯೋಜಿಸಲಾಗಿದೆ.

| KARNATAKA MARITIME BOARD<br>BENGALURU | | |
|---|---|---|
| Name of the Newspaper | **UDAYAVANI** | |
| Date | 06-02-2025 | **Language – KANNADA** |



CAN 3

## ಉತ್ತರ ಕನ್ನಡ

# 'ಕಡಲ ಚಟುವಟಿಕೆ ಕೇಂದ್ರವಾಗಲಿದೆ ಉತ್ತರ ಕನ್ನಡ'

## ಸ್ಥಳೀಯ ಸಮುದಾಯಗಳ ವಿಶ್ವಾಸ ಪಡೆದು ಕೇಣಿ ಸರ್ವಋತು ಬಂದರು ನಿರ್ಮಾಣ: ಜಯರಾಮ್ ರಾಯಪುರ

■ ಉದಯವಾಣಿ ಸಮಾಚಾರ

**ಕಾರವಾರ:** ಉತ್ತರ ಕನ್ನಡ ಕರಾವಳಿ ಮುಂದಿನ ದಿನಗಳಲ್ಲಿ ಕಡಲ ಚಟುವಟಿಕೆಗಳ ಕೇಂದ್ರವಾಗಲಿದೆ ಎಂದು ಮರಿ ಟೈಮ್ ಬೋರ್ಡ್ ಸಿಇಒ ಜಯರಾಮ್ ರಾಯಪುರ ಹೇಳಿದರು.

ಬುಧವಾರ ಪತ್ರಿಕಾಗೋಷ್ಠಿ ಮಾಡಿದ ಅವರು, ಸ್ಥಳೀಯ ಸಮುದಾಯಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೇಣಿ ಸರ್ವಋತು ಬಂದರು, ಕಾರವಾರ ಎರಡನೇ ಹಂತದ ಬಂದರು ಅಭಿವೃದ್ಧಿ ಮಾಡುವುದಾಗಿ ಮಾಹಿತಿ ನೀಡಿದರು.

ರಾಜ್ಯದಲ್ಲಿ ಮುಂಬರುವ ದಿನಗಳಲ್ಲಿ 4 ದೊಡ್ಡ ಬಂದರು ನಿರ್ಮಾಣವಾಗಲಿವೆ. ಅಂಕೋಲಾದ ಕೇಣಿ, ಹೊನ್ನಾವರದ ಪಾವಿನಕುರ್ವೆ ಮತ್ತು ಮಂಕಿಯಲ್ಲಿ ಗ್ರೀನ್ ಫೀಲ್ಡ್ ಬಂದರುಗಳು ನಿರ್ಮಾಣ ಆಗಲಿವೆ. ಮಂಗಳೂರಲ್ಲಿ ಅಂತಾರಾಷ್ಟ್ರೀಯ ಕ್ರೂಸ್ ಆಗಮಿಸಲು ಎಲ್ಲಾ ಅನುಕೂಲ ಕಲ್ಪಿಸಲಾಗುತ್ತಿದೆ. ಇದರಿಂದ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಮರಿಟೈಮ್ ಬೋರ್ಡ್ ಕೈ ಹಾಕಿದೆ ಎಂದರು.

ಉತ್ತರ ಕನ್ನಡದಲ್ಲಿ ಕರ್ನಾಟಕ ಸಮುದ್ರ ತೀರ ಮಂಡಳಿ ರೂಪಿಸಿರುವ ಯೋಜನೆಗಳು ಮತ್ತು ಚಟುವಟಿಕೆಗಳ ಉದ್ದೇಶವು ಜಿಲ್ಲೆಯ ಕರಾವಳಿಯನ್ನು ಸಮಗ್ರವಾಗಿ ಮತ್ತು ಸುಸ್ಥಿರವಾಗಿ ಅಭಿವೃದ್ಧಿಪಡಿಸುವ ಮೂಲಕ ಕರಾವಳಿ ಸಮುದಾಯದ ಸಾಮಾಜಿಕ-ಆರ್ಥಿಕ ಸ್ಥಿತಿಗತಿಗೆ ಉತ್ತೇಜನ ನೀಡಲಿದೆ ಎಂದ ಅವರು, ಕರಾವಳಿ ಚಿತ್ರಣ ಬದಲಾಗಲಿದೆ ಎಂದರು.

**ಕೇಣಿ ಗ್ರೀನ್‌ಫೀಲ್ಡ್ ಬಂದರು:** ಕೇಣಿಯಲ್ಲಿ 30 ಮೆಟ್ರಿಕ್ ಟನ್ ಸಾಮರ್ಥ್ಯದ ಸರ್ವಋತು ಬಂದರನ್ನು ಖಾಸಗಿ ಸಂಸ್ಥೆ ಜೆಎಸ್‌ಡಬ್ಲ್ಯು ನಿರ್ಮಾಣ ಮಾಡಲಿದೆ. ಈ ಸಂಬಂಧ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಪರಿಸರ ಸಂಬಂಧ ಅಧ್ಯಯನ ಮುಂದೆ ನಡೆಯಲಿವೆ ಎಂದರು. ಈ ಬಂದರು ಕೇಣಿಯಿಂದ 3.5 ಕಿ.ಮೀ. ದೂರದ ಸಮುದ್ರದಲ್ಲಿ ಆಗಲಿದೆ. ಅಲ್ಲಿ ಏಳು ಬರ್ತ್ ಬರಲಿವೆ ಎಂದರು.

ಮಂಕಿಯಲ್ಲಿ ಬಹುಪಯೋಗಿ ಬಂದರಿನ ಅಭಿವೃದ್ಧಿ ಮಾಡಲು ಮದ್ರಾಸ್ ಐಐಟಿ ಅಧ್ಯಯನ ಮಾಡಿದೆ ಎಂದರು.

**ಟ್ಯಾಗೋರ್ ಬೀಚ್ ಅಭಿವೃದ್ಧಿ:** ರವೀಂದ್ರನಾಥ ಟ್ಯಾಗೋರ್ ಬೀಚ್‌ಅನ್ನು ಅಭಿವೃದ್ಧಿಪಡಿಸುವ ಯೋಜನೆಯನ್ನು ಸಾಗರ್‌ಮಾಲಾ ಡೆವಲಪ್‌ಮೆಂಟ್ ಕಂಪನಿ ಲಿಮಿಟೆಡ್ (ಇಕ್ವಿಟಿ ಹಂಚಿಕೆ ಮಾದರಿ) ಸಹಯೋಗದೊಂದಿಗೆ ರೂಪಿಸಲಾಗಿದೆ ಎಂದು ಕರ್ನಾಟಕ ಮರಿಟೈಮ್ ಬೋರ್ಡ್ ಸಿಇಒ ಜಯರಾಮ್ ರಾಯಪುರ ಹೇಳಿದರು.

**ಜಲ ವಿಮಾನ ನಿಲ್ದಾಣಗಳ ಸ್ಥಾಪನೆ:** ಸೂಕ್ತ ಅಗತ್ಯ ಜಲಾಶಯ ಸ್ಥಳಗಳಲ್ಲಿ ಸೀಪ್ಲೇನ್ ಕಾರ್ಯಾಚರಣೆಗಳನ್ನು ಕಾರ್ಯಗತಗೊಳಿಸಲು ನಾಗರಿಕ ವಿಮಾನ ನಿಲ್ದಾಣಗಳ ಸ್ಥಾಪನೆಗೆ ನಾಗರಿಕ ವಿಮಾನ ನಿಲ್ದಾಣ ಸಚಿವಾಲಯದೊಂದಿಗೆ ಮಾತುಕತೆ ನಡೆದಿದೆ ಎಂದರು. ಕಾರವಾರ ಬಂದರಿನಲ್ಲಿ ರಫ್ತಾಗದೆ ಇರುವ ಗ್ರಾನೈಟ್ ಕಲ್ಲುಗಳನ್ನು ಶೀಘ್ರದಲ್ಲೇ ತೆರವುಗೊಳಿಸಲಾಗುವುದು.

ಕಾರವಾರ ಬಂದರಿನ ಎರಡನೇ ಹಂತವು ಮೀನುಗಾರಿಕಾ ಹಡಗುಗಳಿಗೆ ಸುರಕ್ಷಿತ ಡಾಕಿಂಗ್ ಜೆಟ್ಟಿ ನಿರ್ಮಾಣ ಆಗಲಿದೆ. ಈ ಸಂಬಂಧ ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯಾ ಅವರೊಂದಿಗೆ ಚರ್ಚಿಸಲಾಗಿದೆ ಎಂದರು.

**ಕಾರವಾರ: ಮೆರಿಟೈಮ್ ಬೋರ್ಡ್ ಸಿಇಒ ಜಯರಾಮ್ ರಾಯಪುರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.**

| KARNATAKA MARITIME BOARD BENGALURU | | |
|---|---|---|
| Name of the Newspaper | **PRAJAVANI** | |
| Date | 06-02-2025 | **Language – KANNADA** |



ಜಲಸಾರಿಗೆ ಮಂಡಳಿ ಸಿಇಒ ಜಯರಾಮ ರಾಯಪುರ ಮಾಹಿತಿ

# ಕಾರವಾರ ವಾಣಿಜ್ಯ ಬಂದರು ವಿಸ್ತರಣೆ ಶೀಘ್ರ

ಪ್ರಜಾವಾಣಿ ವಾರ್ತೆ

ಕಾರವಾರ: 'ಇಲ್ಲಿನ ವಾಣಿಜ್ಯ ಬಂದರು ವಿಸ್ತರಣೆ ಯೋಜನೆಯನ್ನು ಆದಷ್ಟು ಶೀಘ್ರ ಪುನಃ ಕೈಗೆತ್ತಿಕೊಳ್ಳಲಾಗುವುದು. ಯೋಜನೆಯಲ್ಲಿ ಕೆಲ ಮಾರ್ಪಾಡು ಮಾಡಲಾಗಿದೆ' ಎಂದು ಕರ್ನಾಟಕ ಜಲಸಾರಿಗೆ ಮಂಡಳಿ ಸಿಇಒ ಜಯರಾಮ ರಾಯಪುರ ಹೇಳಿದರು.

'ಸಾಗರಮಾಲಾ ಯೋಜನೆಯಡಿ ಅಂದಾಜು ₹210 ಕೋಟಿ ವೆಚ್ಚದಲ್ಲಿ ಕಾರವಾರ ವಾಣಿಜ್ಯ ಬಂದರು ವಿಸ್ತರಿಸುವ ಯೋಜನೆ ವಿರುದ್ಧ ಕೆಲವರು ರಾಷ್ಟ್ರೀಯ ಹಸಿರು ಪೀಠದಲ್ಲಿ ದಾವೆ ಹೂಡಿದ್ದರು. ನ್ಯಾಯಾಲಯದ ಮೊರೆ ಹೋಗಿದ್ದರು. ಜಲಸಾರಿಗೆ ಮಂಡಳಿ ಪರ ತೀರ್ಪು ಬಂದಿದೆ. ಕೆಲವೇ ವಾರದೊಳಗೆ ಬಂದರು ವಿಸ್ತರಣೆ ಕೆಲಸ ಆರಂಭಗೊಳ್ಳಲಿದೆ. ಇದರಿಂದ ಬಂದರು ವಾರ್ಷಿಕ 3ರಿಂದ 12 ದಶಲಕ್ಷ ಟನ್‌ನಷ್ಟು (ಎಂಟಿಪಿ) ನಿರ್ವಹಣಾ ಸಾಮರ್ಥ್ಯ ಹೊಂದಲಿದೆ' ಎಂದು ಇಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

**ಮುಖ್ಯಾಂಶಗಳು**

- ಸಾಗರಮಾಲಾ ಯೋಜನೆಯಡಿ ಅಂದಾಜು ₹210 ಕೋಟಿ ವೆಚ್ಚ
- ಯೋಜನೆಯಲ್ಲಿ ಕೆಲ ಮಾರ್ಪಾಡು
- ಹಡಗು ನಿಲ್ಲುವ ಕಟ್ಟೆ ವಿಸ್ತರಣೆ

'ಬ್ರೇಕ್‌ವಾಟರ್ ಕಡಲತೀರದ ಅಂಚಿನಿಂದ ಅಲೆತಡೆಗೋಡೆ ನಿರ್ಮಾಣ ಪ್ರಸ್ತಾವನ್ನು ಕೈಬಿಡಲಾಗಿದೆ. ಅಲೆಗಳಿದ್ದ ಬಾವುಟಕಟ್ಟೆ ಸಮೀಪದಿಂದ ಅಲೆತಡೆಗೋಡೆ ನಿರ್ಮಾಣಗೊಳ್ಳಲಿದೆ. ಹಡಗು ನಿಲ್ಲುವ ಕಟ್ಟೆ ವಿಸ್ತರಣೆ ಆಗಲಿದೆ. ಅಲ್ಲದೆ, ಕಡಲತೀರದ ಬಹುಭಾಗ ಸ್ವಾಧೀನಗೊಳ್ಳಲಿದ್ದು, ಸಾಂಪ್ರದಾಯಿಕ ಮೀನುಗಾರರಿಗೆ ಸಮಸ್ಯೆ ಆಗದಂತೆ ಕಡಲತೀರ ಬಳಕೆಗೆ ಅವಕಾಶ ನೀಡಲಿದ್ದೇವೆ' ಎಂದರು.

'ಬೈತಖೋಲ ಬಂದರು ಇಲಾಖೆಗೆ ಸೇರಿದ ಜಾಗವಾಗಿದ್ದು ಅದನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಯೂ ನಡೆಯಲಿದೆ. ಅಲ್ಲಿನ ನಿವಾಸಿಗಳಿಗೆ ಚಿತ್ತಾಕುಲ ಗ್ರಾಮದಲ್ಲಿ ಪರ್ಯಾಯ ಭೂಮಿ ಒದಗಿಸಲು ಚಿಂತನೆ ನಡೆದಿದೆ. ಅಮದಳ್ಳಿಯಲ್ಲಿ ಸರಕು ಸಾಗಣೆಗೆ ಪೂರಕವಾಗಿ ವಿಶೇಷ ರೈಲು ನಿಲ್ದಾಣ ಸ್ಥಾಪನೆಗೆ ಕೊಂಕಣ ರೈಲ್ವೆ ನಿಗಮದೊಂದಿಗೆ ಪತ್ರ ವ್ಯವಹಾರ ನಡೆದಿದೆ' ಎಂದರು.

'ಅಂಕೋಲಾ ತಾಲ್ಲೂಕಿನ ಕೇಣಿಯಲ್ಲಿ ನಿರ್ಮಾಣಗೊಳ್ಳಲಿರುವ ಗ್ರೀನ್ ಫೀಲ್ಡ್ ಬಂದರಿಗೆ ಜನರನ್ನು ಒಕ್ಕಲೆಬ್ಬಿಸುವುದಿಲ್ಲ. ಜನವಸತಿ ಇಲ್ಲದ ಪ್ರದೇಶದಲ್ಲಿ ಬಂದರು ನಿರ್ಮಾಣಗೊಳ್ಳಲಿದೆ. ₹4,200 ಕೋಟಿ ವೆಚ್ಚದಲ್ಲಿ ಜೆಎಸ್‌ಡಬ್ಲ್ಯು ಕಂಪನಿ ಬಂದರು ನಿರ್ಮಾಣ ಮಾಡಿ, 30 ವರ್ಷಗಳ ಅವಧಿಗೆ ನಿರ್ವಹಣೆ ಮಾಡಲಿದೆ. ಸುಮಾರು ಒಂದು ಕಿ.ಮೀ ಉದ್ದದ ಗುಡ್ಡವಿರುವ ಕಡಲತೀರ ಸ್ಥಳದಲ್ಲಿ ಬಂದರು ನಿರ್ಮಾಣಗೊಳ್ಳಲಿದೆ. ಬಂದರಿನಿಂದ ಮುಖ್ಯ ಹೆದ್ದಾರಿಗೆ ಸಂಪರ್ಕಿಸಲು 90 ಮೀ ಅಗಲದ ಜಾಗ ಅಗತ್ಯವಿದ್ದು, 150 ಎಕರೆಯಷ್ಟು ಜಾಗ ಮಾತ್ರ ಸ್ವಾಧೀನವಾಗಲಿದೆ. ಈ ಜಾಗದಲ್ಲೇ ಹೆದ್ದಾರಿ, ರೈಲು ಮಾರ್ಗ ಹಾದು ಬರಲಿದೆ' ಎಂದು ವಿವರಿಸಿದರು.

'ಹೊನ್ನಾವರದ ಟೊಂಕದಲ್ಲಿನ ಬಂದರು ಕಾಮಗಾರಿ ಕೈಗೊಳ್ಳಲು ಅನುಮತಿ ಸಿಕ್ಕಿದೆ. ಶೀಘ್ರದಲ್ಲಿಯೇ ಅಲ್ಲಿಯೂ ಕಾಮಗಾರಿ ಆರಂಭಗೊಳ್ಳಲಿದೆ' ಎಂದರು.

ಮಂಡಳಿಯ ಮುಖ್ಯ ಎಂಜಿನಿಯರ್ ದಿವಾಕರ ನಾಯ್ಕ, ಎಕ್ಸಿಕ್ಯೂಟಿವ್ ಎಂಜಿನಿಯರ್ ಎಂ.ವಿ.ಪ್ರಸಾದ್ ಇದ್ದರು.

## ಶಾಶ್ವತ ಯೋಜನೆಗೆ ಡಿಪಿಆರ್

'ರಾಜ್ಯದಲ್ಲಿ ಕಡಲು ಕೊರೆತ ತಡೆಗೆ ಚೆನ್ನೈನ ಸಂಸ್ಥೆಯ ತಜ್ಞರ ನೆರವಿನೊಂದಿಗೆ ₹2.5 ಸಾವಿರ ಕೋಟಿ ವೆಚ್ಚದ ಯೋಜನೆಗೆ ವಿಸ್ತೃತ ಯೋಜನಾ ವರದಿ (ಡಿ.ಪಿ.ಆರ್) ಸಿದ್ಧಪಡಿಸಲಾಗಿದೆ. ಕರಾವಳಿಯ ಮೂರು ಜಿಲ್ಲೆಗಳಿಗೆ ಪ್ರತ್ಯೇಕ ಡಿಪಿಆರ್ ಸಿದ್ಧಗೊಂಡಿದೆ. ಇದಕ್ಕೆ ಸರ್ಕಾರದ ಅನುಮೋದನೆ ಸಿಗಬೇಕಿದೆ' ಎಂದು ಜಲಸಾರಿಗೆ ಮಂಡಳಿಯ ಸಿಇಒ ಜಯರಾಮ ರಾಯಪುರ ತಿಳಿಸಿದರು.

ಜಯರಾಮ ರಾಯಪುರ

| **KARNATAKA MARITIME BOARD BENGALURU** | | |
|---|---|---|
| Name of the Newspaper | **SAMYUKTHA KARNATAKA** | |
| Date | 06-02-2025 | **Language – KANNADA** |

## ಉತ್ತರ ಕನ್ನಡ-ಹಾವೇರಿ



ಕಾರವಾರದ ಜಿಲ್ಲಾ ಪತ್ರಿಕಾಭವನದಲ್ಲಿ ಕರ್ನಾಟಕ ಜಲಸಾರಿಗೆ ಮಂಡಳಿ ಕಾರ್ಯನಿರ್ವಹಣಾಧಿಕಾರಿ ಜಯರಾಮ್ ರಾಯಪುರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು. ಮುಖ್ಯ ಎಂಜಿನಿಯರ್ ದಿವಾಕರ ನಾಯ್ಕ, ಎಕ್ಸಿಕ್ಯೂಟಿವ್ ಎಂಜಿನಿಯರ್ ಪ್ರಸಾದ್, ಸುರೇಶ್ ಶೆಟ್ಟಿ ಇನ್ನಿತರರು ಇದ್ದರು.

# ಕೇಣಿ ಬಂದರು: 150 ಎಕರೆ ಭೂಸ್ವಾಧೀನ

ಕಾರವಾರ: ಅಂಕೋಲಾದ ಕೇಣಿ ಬಂದರು ನಿರ್ಮಾಣಕ್ಕೆ ಸಾರ್ವಜನಿಕರ ಜಮೀನು ಅಗತ್ಯವಿಲ್ಲ. ಆದರೆ ಬಂದರು ಸಂಪರ್ಕಕ್ಕೆ 90 ಮೀ. ಅಗಲ ರಸ್ತೆ, ರೈಲ್ವೆ ಹಾಗೂ ಪೈಪ್‌ಲೈನ್ ನಿರ್ಮಾಣ ಮಾಡುತ್ತಿರುವ ಕಾರಣ ಸುಮಾರು 150 ಎಕರೆ ಭೂಮಿ ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ ಎಂದು ಕರ್ನಾಟಕ ಜಲಸಾರಿಗೆ ಮಂಡಳಿ ಕಾರ್ಯನಿರ್ವಹಣಾಧಿಕಾರಿ ಜಯರಾಮ್ ರಾಯಪುರ ಹೇಳಿದರು.

ನಗರದ ಜಿಲ್ಲಾ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕರ್ನಾಟಕ ಜಲಸಾರಿಗೆ ಮಂಡಳಿಯು ಉತ್ತರಕನ್ನಡದಲ್ಲಿರುವ 13 ಬಂದರುಗಳ ಪೈಕಿ 11 ಬಂದರುಗಳ ಅಭಿವೃದ್ಧಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಿದ್ದು, ರಾಜ್ಯದ ಕರಾವಳಿ ಅಭಿವೃದ್ಧಿಗೆ ಸರ್ವಋತು ರಸ್ತೆಗಳ ನಿರ್ಮಾಣಕ್ಕೆ ಪ್ರಾಥಮಿಕವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ. ಈ ಪ್ರದೇಶದಲ್ಲಿ 66 ಎಂಟಿಪಿಎ ಸ್ಟಾಂಡರ್ಡ್ ರಸ್ತೆಗಳ ಅಗತ್ಯವಿದ್ದು, ಇವುಗಳನ್ನು 120 ಎಂಟಿಪಿಎಗೆ ಏರಿಸಿದರೆ ಇನ್ನಷ್ಟು ಸಾಮರ್ಥ್ಯ ಹೆಚ್ಚಲು ಸಾಧ್ಯವಾಗುತ್ತದೆ ಎಂದರು.

ಕೇಣಿಯಲ್ಲಿ 4200 ಕೋಟಿ ವೆಚ್ಚದಲ್ಲಿ ವಾಣಿಜ್ಯ ಬಂದರು ನಿರ್ಮಾಣದ ಹಕ್ಕನ್ನು ಜೆಎಸ್‌ಡಬ್ಲ್ಯು ಸಂಸ್ಥೆಗೆ 30 ವರ್ಷಗಳ ಗುತ್ತಿಗೆ ನೀಡಲಾಗುತ್ತಿದೆ. ಇಲ್ಲಿ 30 ಎಂಟಿಪಿಎ ಸಾಮರ್ಥ್ಯದ ಬಂದರು ನಿರ್ಮಾಣವಾಗಿ, ನಂತರ ಅದನ್ನು ಮೆರಿಟೈಮ್ ಬೋರ್ಡ್‌ಗೆ ಹಸ್ತಾಂತರಿಸಿಕೊಳ್ಳಲಾಗುತ್ತದೆ. ಸಮುದ್ರ ತೀರದಲ್ಲಿ 1 ಕಿ.ಮೀ ವ್ಯಾಪ್ತಿಯಲ್ಲಿ ಹಾಳದಂತೆ ಸಮುದ್ರದಲ್ಲಿ 400 ಎಕರೆ ಪ್ರದೇಶವನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಆದರೆ ಬಂದರಿಗೆ ಸಂಪರ್ಕಿಸುವ 90 ಮೀಟರ್ ಅಗಲದ ರಸ್ತೆ, ರೈಲ್ವೆ ಮತ್ತು ಪೈಪ್‌ಲೈನ್ ಸೌಕರ್ಯಗಳಿಗೆ 150 ಎಕರೆ ಭೂಮಿ ಮಾತ್ರ ಬೇಕಾಗುತ್ತದೆ. ಈ ಪ್ರದೇಶದಲ್ಲಿ 75 ಕುಟುಂಬಗಳು ಮಾತ್ರ ಇವೆ. ಪುನರ್ವಸತಿ ಕಲ್ಪಿಸಲು ಸರ್ಕಾರ ಸಿದ್ಧವಿದೆ. ರಾಜ್ಯದ ಕಿರು ಬಂದರುಗಳು ಪ್ರಸ್ತುತ ಕೇವಲ 1 ಎಂಟಿಪಿಎ ವಹಿವಾಟು ನಡೆಸುತ್ತಿದೆ. ಇದನ್ನು ಹೆಚ್ಚಿಸಲು ಯೋಜನೆಗಳನ್ನು ರೂಪಿಸಲಾಗುತ್ತಿದೆ ಎಂದರು.

ಹೊನ್ನಾವರದ ಹಳೆಯ ಬಂದರನ್ನು ಪಿಪಿಪಿ (ಸಾರ್ವಜನಿಕ-ಖಾಸಗಿ ಪಾಲುದಾರಿ) ಮಾದರಿಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಮಂಕಿಯಲ್ಲಿ 14 ಎಂಟಿಪಿಎ ಸಾಮರ್ಥ್ಯದ ಬಂದರು ಮತ್ತು ಮುರ್ಡೇಶ್ವರದಲ್ಲಿ ಮೀನುಗಾರಿಕೆ ಸಹಿತ ಬಂದರು ನಿರ್ಮಾಣಕ್ಕೆ ಯೋಜನೆಗಳು ಸಿದ್ಧವಾಗಿವೆ. ಭಟ್ಕಳದಲ್ಲಿ ವಾಣಿಜ್ಯ ಬಂದರಿಗಾಗಿ ಸಂಶೋಧನೆ ನಡೆಯುತ್ತಿದೆ. ಕಾರವಾರದ ಬಂದರನ್ನು ಸಾಗರಮಾಲಾ ಎರಡನೇ ಹಂತದ ಯೋಜನೆಯಡಿ ಅಭಿವೃದ್ಧಿಪಡಿಸಲಾಗುತ್ತಿದೆ. ಈಗಾಗಲೇ ಇದಕ್ಕೆ ಇದ್ದ ಕಾನೂನಿನ ಅಡೆತಡೆಗಳು ಬಗೆಹರಿದಿದ್ದು, ಸರ್ಕಾರದ ಪರ ತೀರ್ಪು ಬಂದಿರುವ ಕಾರಣ ಸದ್ಯದಲ್ಲಿಯೇ ಕಾಮಗಾರಿ ಪ್ರಾರಂಭಿಸಲಾಗುವುದು ಎಂದರು.

ಕರಾವಳಿ ಅಭಿವೃದ್ಧಿಯೊಂದಿಗೆ ಕಡಲತೀರದ ಕೊರೆತ ಸಮಸ್ಯೆಯನ್ನು ನಿವಾರಿಸಲು ರಾಷ್ಟ್ರದಲ್ಲೇ ಮೊದಲ ಬಾರಿಗೆ ಅಧ್ಯಯನಗಳನ್ನು ಪ್ರಾರಂಭಿಸಲಾಗಿದೆ. ಗ್ಲೋಬಲ್ ವಾರ್ಮಿಂಗ್‌ನ ಪರಿಣಾಮಗಳನ್ನು ಪರಿಗಣಿಸಿ, ತಾತ್ಕಾಲಿಕ ಮತ್ತು ಶಾಶ್ವತ ಪರಿಹಾರಗಳ ಕಡೆಗೆ ಕ್ರಮಗಳನ್ನು ರೂಪಿಸಲಾಗುತ್ತಿದೆ. ಕಾರವಾರ ಬಂದರು ವಿಸ್ತರಣೆಗೆ ಸಂಬಂಧಿಸಿದ ನ್ಯಾಯಾಲಯದ ವಿವಾದಗಳು ಸರ್ಕಾರದ ಪರವಾಗಿ ನಿರ್ಧಾರಗೊಂಡಿದ್ದು, ಶೀಘ್ರದಲ್ಲಿ ಈ ಕಾರ್ಯಗಳನ್ನು ಪ್ರಾರಂಭಿಸಲು ಯೋಜಿಸಲಾಗಿದೆ. ಸ್ಥಳೀಯರ ಸಹಭಾಗಿತ್ವದೊಂದಿಗೆ ಎಲ್ಲಾ ಯೋಜನೆಗಳನ್ನು ಪಾರದರ್ಶಕವಾಗಿ ಕಾರ್ಯಗತಗೊಳಿಸಲಾಗುವುದು ಎಂದು ಹೇಳಿದರು.

| KARNATAKA MARITIME BOARD<br>BENGALURU | | |
|---|---|---|
| Name of the Newspaper | **KARWAR MUNJANE (PAGE-1)** | |
| Date | 06-02-2025 | **Language – KANNADA** |



# ಕಾರವಾರ ಬಂದರು ಅಭಿವೃದ್ಧಿ ಕಾಮಗಾರಿಗೆ ಕೊನೆಗೂ ಗ್ರೀನ್ ಸಿಗ್ನಲ್ ಕೊಟ್ಟ ಹಸಿರು ಪೀಠ

- ಐದು ವರ್ಷದಿಂದ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದ್ದ ಬಂದರು ವಿಸ್ತರಣಾ ಕಾಮಗಾರಿ
- ವಿಸ್ತರಣಾ ಯೋಜನೆಯ ವಿರುದ್ಧ ನ್ಯಾಯಾಲಯದ ಮೊರೆ ಹೋಗಿದ್ದ ಮೀನುಗಾರರು
- ಕಾನೂನಿನ ತೊಡಕು ನಿವಾರಣೆಯಾಗುತ್ತಿದ್ದಂತೆ ಮತ್ತೆ ಗರಿಗೆದರಿದ ಬಂದರು ಅಭಿವೃದ್ಧಿ ಕನಸು

ಸಾಗರಮಾಲಾ ಯೋಜನೆಯಡಿ ವೈತಕೋಲ್ ಬಂದರು ಎರಡನೇ ಹಂತದ ವಿಸ್ತರಣೆ ಯೋಜನೆ ವಿರೋಧಿಸಿ ಕೆಲವರು ಎನ್‌ಜಿಟಿ ಮೊರೆ ಹೋಗಿದ್ದರು. ಇದೀಗ ಎನ್‌ಜಿಟಿಯಲ್ಲಿ ಕಾನೂನು ಪ್ರಕಾರವಾಗಿಯೇ ಬಂದರು ಕಾಮಗಾರಿ ನಡೆಸಲಾಗುತ್ತಿದೆ ಎಂದು ಅಧ್ಯಯನದ ವರದಿ ಆಧರಿಸಿ ನಮ್ಮ ಪರವಾಗಿಯೇ ಆದೇಶ ನೀಡಿದ್ದು ಇನ್ನು ಒಂದು ತಿಂಗಳೊಳಗಾಗಿ ಕಾಮಗಾರಿ ಆರಂಭಿಸಲಾಗುವುದು.

■ ಜಯರಾಮ್ ರಾಮಪುರ
ಕರ್ನಾಟಕ ಜಲಸಾರಿಗೆ ಮಂಡಳಿ
ಕಾರ್ಯನಿರ್ವಹಣಾಧಿಕಾರಿ

| **KARNATAKA MARITIME BOARD<br>BENGALURU** | | |
|---|---|---|
| Name of the Newspaper | **KARAWALI MUNJANE (PAGE-2)** | |
| Date | 06-02-2025 | **Language – KANNADA** |

# ಕೇಣಿ ಗ್ರೀನ್‌ಫೀಲ್ಡ್ ಬಂದರಿನಿಂದ ಉದ್ಯೋಗ ಸೃಷ್ಟಿ: ಜಯರಾಮ ರಾಯಪುರ

ಮೊದಲನೇ ಪುಟದಿಂದ

ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಕೇಣಿ ಬಂದರನ್ನು ಸಮುದ್ರದಲ್ಲಿ ಮರು ಸ್ಥಾಪಿಸಲಾದ ಭೂಮಿಯಲ್ಲಿ ನಿರ್ಮಿಸಲಾಗುವುದು. ಕೇವಲ ರಸ್ತೆ ಹಾಗೂ ರೈಲು ಮಾರ್ಗಕ್ಕೆ ಮಾತ್ರ ಭೂಮಿ ಬೇಕಾಗಲಿದೆ. ಇವರಿಗೂ ನ್ಯಾಯಯುತ ಪರಿಹಾರ ನೀಡಲಾಗುವುದು. ಈ ಯೋಜನೆಯಿಂದ ಸ್ಥಳೀಯವಾಗಿ ಮೂಲ ಸೌಕರ್ಯ ಹೆಚ್ಚಲಿದ್ದು, ಸ್ಥಳೀಯ ಮೀನುಗಾರಿಕೆ ಸಮುದಾಯಗಳಿಗೆ ಹೆಚ್ಚಿನ ಅವಕಾಶ ಲಭ್ಯವಾಗಲಿದೆ ಎಂದರು.

ಸಭೆಯ ಕೊನೆಯಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಕೆ. ಲಕ್ಷ್ಮೀಪ್ರಿಯಾ ಅವರು, ಕರ್ನಾಟಕ ಮಾರಿಟೈಮ್ ಬೋರ್ಡ್‌ನ ಯೋಜನೆಗಳು ಈ ಪ್ರದೇಶದಲ್ಲಿ ಸಕಾರಾತ್ಮಕ ಪರಿಣಾಮಗಳನ್ನು ಬೀರಲಿದೆ. ಈ ಯೋಜನೆಗಳಿಂದ ಉತ್ತಮ ಮೂಲಸೌಕರ್ಯ ಮತ್ತು ಅವಕಾಶಗಳು ಹೆಚ್ಚುವ ಮೂಲಕ ಈ ಪ್ರದೇಶದ ಸಾಮಾಜಿಕ-ಆರ್ಥಿಕ ಪರಿಸ್ಥಿತಿ ಸುಧಾರಿಸಲಿದೆಯಲ್ಲದೇ, ಸ್ಥಳೀಯ ಮೀನುಗಾರಿಕಾ ಸಮುದಾಯಗಳಿಗೆ ದೀರ್ಘಾವಧಿ ಪ್ರಯೋಜನವಾಗಲಿದೆ. ಸ್ಥಳೀಯ ಜನತೆಗೆ ಯಾವುದೇ ಸಮಸ್ಯೆಗಳಿದ್ದಲ್ಲಿ ಅದನ್ನು ಕೂಡಲೇ ಪರಿಹರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಮೀನುಗಾರಿಕೆ ಇಲಾಖೆ ನಿರ್ದೇಶಕ ದಿನೇಶ ಕಲ್ಲೇರ ಉಪಸ್ಥಿತರಿದ್ದರು.

## ಪಾವಿನಕುರ್ವೆಯಲ್ಲಿ ನೂತನ ಗ್ರೀನ್ ಫೀಲ್ಡ್ ಬಂದರು

ಕೇಣಿ ಗ್ರೀನ್ ಫೀಲ್ಡ್ ಬಂದರಿನ ಜೊತೆಗೆ ಕರ್ನಾಟಕ ಮಾರಿಟೈಮ್ ಬೋರ್ಡ್‌ನಿಂದ ಉತ್ತರ ಕನ್ನಡ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾದ ಇತರ ಕಡಲ ಯೋಜನೆಗಳ ಬಗ್ಗೆ ವಿವರಿಸಿದ ಜಯರಾಮ ರಾಯಪುರ, ಉತ್ತರ ಕನ್ನಡದ ಆರ್ಥಿಕ ಚೌಕಟ್ಟು ಮತ್ತು ಸಾಮಾಜಿಕ ಪ್ರಗತಿಯನ್ನು ಬಲಪಡಿಸಲು ಪಾವಿನಕುರ್ವೆಯಲ್ಲಿ ಹೊಸ ಗ್ರೀನ್‌ಫೀಲ್ಡ್ ಬಂದರು ಯೋಜನೆ ಹಮ್ಮಿಕೊಳ್ಳಲಾಗಿದೆ. ಕಾರವಾರದ ರವೀಂದ್ರನಾಥ ಟಾಗೋರ್ ಬೀಚ್‌ನಲ್ಲಿ ಪ್ರವಾಸೋದ್ಯಮ ಮತ್ತು ಮನರಂಜನಾ ಚಟುವಟಿಕೆಗಳನ್ನು ಉತ್ತೇಜಿಸುವ ಯೋಜನೆ ಹಮ್ಮಿಕೊಳ್ಳಲಾಗುವುದು. ಪರಿಸರ-ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು, ಪ್ರದೇಶದ ನೈಸರ್ಗಿಕ ಸೌಂದರ್ಯವನ್ನು ಸಂರಕ್ಷಿಸಲು ಪರಿಸರ ಸ್ನೇಹಿ ರೀತಿಯಲ್ಲಿ ಇದುವರೆಗೆ ಬಳಕೆಯಲ್ಲಿ ಇಲ್ಲದ ದ್ವೀಪಗಳ ಕೇಂದ್ರೀಕೃತ ಅಭಿವೃದ್ಧಿ ಮಾಡಲಾಗುವುದು. ಸಂಪರ್ಕವನ್ನು ಸುಧಾರಿಸಲು ಮತ್ತು ಪ್ರಾದೇಶಿಕ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ತದಡಿ-ಅಘನಾಶಿನಿ ಫೆರ್ರಿ ಲೈನ್ ಮತ್ತು ಕಾಳಿ ಜಲಮಾರ್ಗದಂತಹ ನಿರ್ಣಾಯಕ ಜಲಮಾರ್ಗಗಳ ರಚನೆ ಮಾಡಲಾಗುವುದು ಎಂದರು.

<table>
<tr><th colspan="3">KARNATAKA MARITIME BOARD<br>BENGALURU</th></tr>
<tr><td>Name of the Newspaper</td><td colspan="2">NUDI JENU</td></tr>
<tr><td>Date</td><td>06-02-2025</td><td>Language – KANNADA</td></tr>
</table>



ನುಡಿ ಜೇನು

# ಸಾಗರಮಾಲಾ ಯೋಜನೆಗೆ ಮರುಜೀವ: ಶೀಘ್ರದಲ್ಲೇ ಕಾಮಗಾರಿ ಆರಂಭ?